ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ನ್ಯಾಯಾಲಯ, ದಾವಣಗೆರೆ.

MVC ನಂ. 343/2023

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಡಾಃ ಕಿರಣ್ ಹೆಚ್ ವೈ | RW–1 |
| ತಂದೆ:ಗಂಡನ ಹೆಸರು | – | ಯೋಗೇಂದ್ರಸ್ವಾಮಿ | |
| ವಯಸ್ಸು | – | 46 ವರ್ಷ | |
| ಉದ್ಯೋಗ | – | Facio maxillary Surgeon, City Central Hospital, Davanagere | |
| ವಾಸ ಸ್ಥಳ | – | Davanagere, | |

ದಿನಾಂಕಃ 25–09–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಶ್ರೀ ಸಿ ಎಸ್ ರವರಿಂದಃ–</u>

ನ್ಯಾಯಾಲಯದ ಆದೇಶದಂತೆ ದಾಖಲೆ ಹಾಜರುಪಡಿಸುತ್ತಿದ್ದೇನೆ. ಎಂ ಎಲ್ ಸಿ ವಹಿ, ಕೇಸ್ ಶೀಟನ್ನು ಹಾಜರುಪಡಿಸಿದ್ದು ಅವುಗಳನ್ನು ನಿಅರ್–1 ಮತ್ತು 2 ಎಂದು ಗುರುತಿಸಲಾಯಿತು. ಅರ್ಜಿದಾರರನ್ನು ತಾಃ 15.12.2022 ರಂದು ಪರಿಶೀಲಿಸಿದೆ. ಅವರು ಬೈಕಿನಿಂದ ಬಿದ್ದು ಮುಖ ಮತ್ತು ಹೊಟ್ಟೆ ಗಾಯವಾಗಿದೆ ಎಂದು ಹೇಳಿದ್ದರು. ಅರ್ಜಿದಾರರ ಹೇಳಿಕೆಯಂತೆ ಬರೆದಿರುತ್ತೇನೆ.

<u>ಪಾಟೀ ಸವಾಲುಃ– ವಿಡಿಪಿ ವಕೀಲರಿಂದಃ</u>

ಅರ್ಜಿದಾರರಿಗೆ ನಿಆರ್–2 ಡಿಸ್ ಚಾರ್ಜ ಸಮ್ಮರಿಯಲ್ಲಿ ನಮೂದಾಗಿರುವ ಎಲ್ಲಾ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ. ಒಮ್ಮೆ ಅರ್ಜಿದಾರ ಆಸ್ಪತ್ರೆಗೆ ದಾಖಲಾಗಿ ಬಿಡುಗಡೆ ಹೊಂದಿದ್ದು ಇನ್ನೊಮ್ಮೆ ದಾಖಲಾಗಿ ಸರ್ಜರಿ ಮಾಡಿಸಿಕೊಂಡಿರುತ್ತಾರೆ. ಎಂ ಎಲ್ ಸಿ ಯನ್ನು ನಾನು ದಾಖಲು ಮಾಡಿರುವುದಿಲ್ಲ. ಎಂ ಎಲ್ ಸಿ ಮಾಡಿದ ವೈದ್ಯರೇ ಪೊಲೀಸರಿಗೆ ದಾಖಲೆ ಕಳಿಸುತ್ತಾರೆ ಎಂದರೆ ಸರಿ. ಸದರಿ ವೈದ್ಯರ ಹೆಸರು ವಿಜಯಕುಮಾರ್ ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ ಎಲ್ ಸಿ ವಹಿ ಪ್ರಕಾರ ಅರ್ಜಿದಾರನಿಗೆ ಟ್ರಾಕ್ಟರ್ ಮತ್ತು ಬೈಕ್ ನಡುವೆ ಅಪಘಾತದಲ್ಲಿ ಗಾಯವಾಗಿದೆ ಎಂದರೆ ಸಾಕ್ಷಿಯು ನನ್ನ ಬಳಿ ಬೈಕಿನಿಂದ ಬಿದ್ದಿರುವುದಾಗಿ ಹೇಳಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಅಪಘಾತವಾದಾಗ ಅರ್ಜಿದಾರ ಪ್ರಜ್ಞಾಹೀನನಾಗಿದ್ದ ಎಂದರೆ ಸರಿಯಲ್ಲ. ಆ ದಿನ ಟ್ರಾಕ್ಟರ್ ಮತ್ತು

ಬೈಕಿನ ನಡುವೆ ಅಪಘಾತವಾಗಿದ್ದರುೂ ನನ್ನ ಕೈತಪ್ಪಿನಿಂದ ಬೈಕಿನಿಂದ ಬಿದ್ದಿರುವುದಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ನನಗೆ ಎಂ ಎಲ್ ಸಿ ಬಗ್ಗೆ ಮಾಹಿತಿ ಇಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ